# ಶಾಹಿ ಎಕ್ಸ್ ಪೋರ್ಟ್ಸ್ ಪ್ರೈವೇಟ್ ಲಿಮಿಟೆಡ್, ಘಟಕ 26 (ಭಾರತ)
## ತೃತೀಯ ಪಕ್ಷದ ದೂರಿನ ತನಿಖೆ
## ಸಾರಾಂಶ ವರದಿ
## ಜೂನ್ 23, 2023

FLAಯು ನವೆಂಬರ್ 2021ರಲ್ಲಿ ಬೆಂಗಳೂರಿನ ಉಡುಪು ಕಾರ್ಮಿಕರ ಸಂಘ (GLU)ದಿಂದ ಒಂದು ದೂರನ್ನು ಸ್ವೀಕರಿಸಿತು ("ಸಂಘ") ಇದರಲ್ಲಿ ಸಂಘಟನಾ ಸ್ವಾತಂತ್ರ್ಯ (FOA), ಕಿರುಕುಳ ಮತ್ತು ನಿಂದನೆ, ಮತ್ತು ಆರೋಗ್ಯ ಹಾಗೂ ಸುರಕ್ಷತೆಯ ಉಲ್ಲಂಘನೆಗಳು ಶಾಹಿ ಎಕ್ಸ್ ಪೋರ್ಟ್ಸ್ ಪ್ರೈವೇಟ್ ಲಿಮಿಟೆಡ್, ಘಟಕ 26, ಮದ್ದೂರು ಬಳಿ, ಮಂಡ್ಯ ಜಿಲ್ಲೆ, ಕರ್ನಾಟಕದ, ಭಾರತ, ಇಲ್ಲಿರುವ ಕಾರ್ಖಾನೆಯಲ್ಲಿ ಜರುಗುತ್ತಿವೆ ಎಂದು ಆಪಾದನೆಗಳನ್ನು ಮಾಡಲಾಗಿತ್ತು. ಕಾರ್ಖಾನೆಯ ಅಭ್ಯಾಸಗಳು FLAಯ ನಡವಳಿಕಾ ಸಂಹಿತೆ ಮತ್ತು ಪಾಲನಾ ಮಾನದಂಡಗಳನ್ನು ಅನುಸರಿಸುತ್ತಿಲ್ಲ ಎಂದು ಆಪಾದನೆ ಮಾಡಲಾಗಿತ್ತು.

ವಿಳಂಬಗಳು ಮತ್ತು FLA ಸದಸ್ಯನಾದ ಮತ್ತು ಕಾರ್ಖಾನೆಯಿಂದ ಬ್ರ್ಯಾಂಡ್ ಖರೀದಿಸುತ್ತಿರುವ ನೈಕಿ ಇಂಕ್., ಪ್ರತಿನಿಧಿಗಳೊಂದಿಗೆ ನಿರಂತರ ತೊಡಗಿಸಿಕೊಳ್ಳುವಿಕೆ ಮತ್ತು ಸಮಾಲೋಚನೆ ಹಾಗೂ GLU ಅಧಿಕಾರಿಗಳೊಂದಿಗೆ ನಡೆಯುತ್ತಿರುವ ಸಂವಹನೆಗಳ ನಂತರ, FLAಯು ಏಪ್ರಿಲ್ 2022ರಲ್ಲಿ GLU ಮಾಡಿರುವ ಮೇಲೆ-ನಮೂದಿಸಿರುವ ಆಪಾದನೆಗಳಿಗೆ ಸಂಬಂಧಿದಂತೆ ತೃತೀಯ ಪಕ್ಷದ ದೂರು ತನಿಖೆಯನ್ನು ಪ್ರಾರಂಭಿಸಿತು.

ತನ್ನ ತೃತೀಯ ಪಕ್ಷದ ದೂರು ವ್ಯವಸ್ಥೆಯ ವಿಶ್ವಾಸಾರ್ಹ ಮತ್ತು ಯಶಸ್ವೀ ಬಳಕೆಯು FLAಯ ಸ್ವತಂತ್ರ ತನಿಖಾಧಿಕಾರಿಗಳು ತಮ್ಮ ವರದಿಗಳು ಪುರಾವೆಯ ತೀವ್ರ ಮತ್ತು ವಸ್ತುನಿಷ್ಠ ವಿಶ್ಲೇಷಣೆಯ ಮೇಲೆ ಆಧಾರಿಸಿವೆ ಎಂಬುದನ್ನು ಖಚಿತಪಡಿಸಿಕೊಳ್ಳುವ ಅವರ ಸಾಮರ್ಥ್ಯವನ್ನು ಅವಲಂಬಿಸಿದ್ದು, FLA ನೈಕಿ ಜೊತೆಗೆ ಕೆಲಸ ಮಾಡಿತು ಮತ್ತು ಶಾಹಿ ಕಾರ್ಖಾನೆಯ ತನಿಖೆ ನಡೆಸಲು ವಿಭಿನ್ನ ಅಭ್ಯರ್ಥಿಗಳನ್ನು ವಿಮರ್ಶೆ ಮಾಡಿತು. ಜುಲೈ 2022ರಲ್ಲಿ, FLA ಈ ತನಿಖೆಯನ್ನು ನಡೆಸಲು ಅಸೋಸಿಯೇಶನ್ ಫಾರ್ ಸ್ಟಿಮ್ಯುಲೇಟಿಂಗ್ ನೋ ಹೌ (ASK) ಅನ್ನು ಆಯ್ಕೆ ಮಾಡಿತು. FLA ಈ ಮುನ್ನ ಭಾರತದಲ್ಲಿ ಕ್ಲಿಷ್ಟ ಕಾರ್ಖಾನೆ ತನಿಖೆಗಳನ್ನು ನಡೆಸಲು ASK ಅನ್ನು ತೊಡಗಿಸಿಕೊಂಡಿರುವ ಅನುಭವ ಹೊಂದಿತ್ತು.

ಅಕ್ಟೋಬರ್ 2022ರಲ್ಲಿ, ತನಿಖೆಯ ಸ್ವರೂಪದ ಬಗ್ಗೆ ನೈಕಿ ಜೊತೆಗೆ ಸಮಾಲೋಚನೆಗಳನ್ನು ನಡೆಸಿದ ನಂತರ, FLA ಮತ್ತು ASK ತನಿಕೆಯ ಕಾರ್ಯಕ್ಕಾಗಿ ಉಲ್ಲೇಖದ ಷರತ್ತುಗಳ ಜೊತೆಗೆ ಒಪ್ಪಂದವೊಂದನ್ನು ಮಾಡಿಕೊಂಡವು. ASK, ಡಾ. ಅಕೀಲ್ ಖಾನ್, ಅವರ ನೇತೃತ್ವದಲ್ಲಿ, ತನ್ನ ಕಾರ್ಯ ಯೋಜನೆಯನ್ನು ವಿವರಿಸಲು ಸಂಬಂಧಿತ ಪಕ್ಷಗಳನ್ನು ಸಂಪರ್ಕಿಸಿತು, ಮತ್ತು ಆ ನಂತರ ಶಾಹಿ ಕಾರ್ಖಾನೆಯಲ್ಲಿ 2022ರ ನವೆಂಬರ್ 4-6ವರೆಗೆ ವಿವರವಾದ ಸತ್ಯಶೋಧನೆಯ ತನಿಖೆಯನ್ನು ನಡೆಸಿತು. ಇದಾದನಂತರ, ASK ಆ ತನಿಖೆಯಿಂದ ಸಂಗ್ರಹಿಸಿದ ಮತ್ತು ವಿಶ್ಲೇಷಿಸಿದ ಮಾಹಿತಿಯನ್ನು ತನ್ನ ವರದಿಯೊಳಗೆ ಕ್ರೋಢೀಕರಿಸುವ ಸವಾಲುಪೂರ್ಣ ಕಾರ್ಯವನ್ನು ಕೈಗೆತ್ತಿಕೊಂಡಿತು,

ವರದಿಯನ್ನು ಪೂರ್ಣಗೊಳಿಸಲು ಬೇಕಾದ ಧೀರ್ಘ ಪ್ರಕ್ರಿಯೆಯಾದ್ಯಂತ ಮತ್ತು ಈ ದಿನ FLAಯ ವೆಬ್ ಸೈಟಿನಲ್ಲಿ ಪ್ರಕಟಿಸಲಿರುವ ಅಂತಿಮ ಆವೃತ್ತಿಯನ್ನು ತಯಾರಿಸುವುದು, ತನಿಖೆಗೆ ಪಕ್ಷಗಳಾಗಿರುವವರಿಂದ ನಿರ್ದಿಷ್ಟ ಶೋಧನೆಗಳ ಮೇಲೆ ಎಚ್ಚರಿಕೆಯ ವಿಮರ್ಶೆ ಮತ್ತು ಪ್ರತಿಕ್ರಿಯೆಯೂ ಸೇರಿದಂತೆ, ಸ್ವೀಕರಿಸಿದ ಆಪಾದನೆಗಳು ಮತ್ತು ಮೂರು ಮೂಲ ಕ್ಷೇತ್ರಗಳಲ್ಲಿ ಪ್ರತಿಯೊಂದನ್ನೂ ಒಳಗೊಂಡಂತೆ ಸುಧಾರಣೆಗಾಗಿ ಶಿಫಾರಸುಗಳಿಗೆ ಸಂಬಂಧಿಸಿದಂತೆ ASK ಎಂದೂ ತನ್ನ ಗಮನವನ್ನು ಮೂಲ ಶೋಧನೆಗಳಿಂದ ಕದಲಿಸಲಿಲ್ಲ. ಆ ಶೋಧನೆಗಳು ಮತ್ತು ಶಿಫಾರಸುಗಳು ಅದರ ಅಂತಿಮ ವರದಿಯ ಹೃದಯ ಭಾಗವಾಗಿವೆ.

ASKನ ವಿಧಾನ ಮತ್ತು ಸತ್ಯಶೋಧನಾ ಪ್ರಕ್ರಿಯೆಯ ಸವಿವರ ವಿವರಣೆಯನ್ನು ಅನುಸರಿಸುವ ಶೋಧನೆಗಳನ್ನು ಸ್ಪಷ್ಟವಾಗಿ ಪ್ರಸ್ತುತಪಡಿಸಲಾಗಿದೆ, ಐವರು ಸಂಘಟನಾ ಸ್ವಾತಂತ್ರ್ಯದ ಸಮಸ್ಯೆಗಳತ್ತ ಗಮನ ಹರಿಸುವುದು; ಹತ್ತು ವಿಸ್ತಾರವಾಗಿ-ರೂಪಿಸಿರುವ ಕಿರುಕುಳ ಮತ್ತು ನಿಂದನೆ ಶೀರ್ಷಿಕೆಯೊಳಗೆ; ಮತ್ತು ಏಳು ಆರೋಗ್ಯ ಮತ್ತು ಸುರಕ್ಷತೆಯ ಅಂತರ್ಗತ. ಅವುಗಳನ್ನು ಶಾಹಿ ಕಾರ್ಖಾನೆ ಆಡಳಿತವರ್ಗ ಮತ್ತು ಸಂಘ ಇಬ್ಬರೂ, ಸಮಸ್ಯೆಗಳು ಮತ್ತು ASK ತಲುಪಿರುವ ವಿವಿಧ ತೀರ್ಮಾನಗಳನ್ನು ಸ್ಪಷ್ಟವಾಗಿ ಅರ್ಥಮಾಡಿಕೊಳ್ಳಲು ಸಾಧ್ಯವಾಗುವ ರೀತಿಯಲ್ಲಿ ರೂಪಿಸಲಾಗಿದೆ.

ಐದು ಕೇಂದ್ರೀಯ ಶಿಫಾರಸುಗಳನ್ನೂ ಸಹ ASK ವರದಿಯ ಅಂತಿಮ ಪುಟದಲ್ಲಿ ಅತ್ಯಂತ ಸ್ಪಷ್ಟವಾಗಿ ನೀಡಲಾಗಿದೆ. ಕಿರುಕುಳ ಮತ್ತು ನಿಂದನೆಯ ಮೇಲೆ ಎರಡು ಮತ್ತು ಸಾಂಸ್ಥಿಕ ಬದಲಾವಣೆಗಳ ಮೇಲೆ ಒಂದು ನಿರ್ದಿಷ್ಟಸ್ವರೂಪದ ಶಿಫಾರಸು ಸೇರಿದಂತೆ ಇವುಗಳು ಆಪಾದನೆಗಳ ಮೂರು ಪ್ರದೇಶಗಳಲ್ಲಿ ಪ್ರತಿಯೊಂದರತ್ತ ಗಮನ ಹರಿಸುತ್ತವೆ.

ಈಗ, ವರದಿಯ ಪ್ರಕಟಣೆಯೊಂದಿಗೆ, ಪ್ರಕ್ರಿಯೆಯು ಪರಿಹಾರದತ್ತ ಚಲಿಸುತ್ತದೆ: ಆ ಶಿಫಾರಸುಗಳನ್ನು ಜಾರಿಗೊಳಿಸಲು ಅಗತ್ಯವಾದ ನಿರ್ದಿಷ್ಟ ಸರಿಪಡಿಸುವಿಕೆಯ ಕ್ರಮಗಳ ಸೆಟ್. ನೈಕಿಯು FLAಗೆ ವರದಿ ಮಾಡಿ ಶಾಹಿ ಆಡಳಿತವರ್ಗದಿಂದ ಈಗಾಗಲೇ ಪರಿಹಾರದ ಕೆಲಸಗಳು ಜಾರಿಯಲ್ಲಿವೆ – ಇದು ಅಂತಿಮ ವರದಿ ಪ್ರಕಟಣೆಯ ಮುಂಚೆಯೇ ಪ್ರಾರಂಭವಾಗಿದ್ದು – ಮತ್ತು ಅದು ಒಂದು ಕಾರ್ಯಚೌಕಟ್ಟಿನ ದಾಖಲೆಯೊಂದನ್ನು ಹಂಚಿಕೊಂಡಿದೆ, ಈ ದಾಖಲೆಯು ವಿಶೇಷವಾಗಿ ತರಬೇತಿ ಉಪಕ್ರಮಗಳತ್ತ ಗಮನ ಕೇಂದ್ರೀಕರಿಸಿದೆ.

FLA ಈ ಮಾಹಿತಿಯನ್ನು ಸ್ವಾಗತಿಸುತ್ತದೆ ಮತ್ತು ಐದು ಶಿಫಾರಸುಗಳಿಗೆ ಸಂಬಂಧಿಸಿದಂತೆ ಪರಿಹಾರದ ಕಾರ್ಯಗಳು ಹೇಗೆ ಪ್ರಗತಿ ಹೊಂದುತ್ತಿವೆ ಎಂಬ ಕುರಿತು ಮತ್ತಷ್ಟು ಮಾಹಿತಿಗಳನ್ನು ಪಡೆಯುವುದನ್ನು ಎದುರು ನೋಡುತ್ತದೆ. ಮೇಲೆ ಗಮನಿಸಿರುವಂತೆ, ಸಂಘಟನಾ ಸ್ವಾತಂತ್ರ್ಯ ಕುರಿತಂತೆ ASKನಿಂದ ನಿರ್ದಿಷ್ಟ ಶಿಫಾರಸುಗಳು ಇರುತ್ತವೆ – GLU ದೂರಿನಲ್ಲಿ ತಿಳಿಸಲಾಗಿರುವ ವಿಷಯಕ್ಕೆ ಕೇಂದ್ರವಾದ ಸಮಸ್ಯೆಗಳಿಗೆ ಸಂಬಂಧಿಸಿದಂತೆ – ಹಾಗೂ ಕಿರುಕುಳ ಮತ್ತು ನಿಂದನೆ ಸಮಸ್ಯೆಯನ್ನು ನಿರ್ವಹಿಸುವಲ್ಲಿ ಮತ್ತು GLUದಿಂದ ಪ್ರಾರಂಭದಲ್ಲಿ ವ್ಯಕ್ತಪಡಿಸಲಾದ ಆರೋಗ್ಯ ಮತ್ತು ಸುರಕ್ಷಾ ಆತಂಕಗಳ ಶ್ರೇಣಿ ಮತ್ತು ತನಿಖೆಯ ಕಾಲದಲ್ಲಿ ವಿವರವಾಗಿ ತಿಳಿಸಿರುವಂತೆ.

ಪ್ರತಿಯೊಂದೂ ಪ್ರದೇಶದಲ್ಲಿ, ದೂರನ್ನು ಗಂಭೀರಗೊಳಿಸಿದ ಮತ್ತು ತನಿಖಾ ತಂಡದ ಸತ್ಯಶೋಧನಾ ಅಭಿಯಾನದಲ್ಲಿ ದಾಖಲಿಸಲಾದ ಸಮಸ್ಯೆಗಳು ಮರುಕಳಿಸುವುದನ್ನು ತಡೆಗಟ್ಟಲು ಅಗತ್ಯವಾದ ನಿರ್ದಿಷ್ಟ ಕ್ರಮಗಳನ್ನು ಅಭಿವೃದ್ಧಿಪಡಿಸಲು ಮತ್ತು ಜಾರಿಗೊಳಿಸುವ ಅವಶ್ಯಕತೆಯನ್ನು ವರದಿಯು ಸಂಕ್ಷಿಪ್ತವಾಗಿ



ಪ್ರಸ್ತುತಪಡಿಸುತ್ತದೆ. ಸರಿಪಡಿಸುವ ಕ್ರಮವು ನಿಕಟವಾಗಿ ವರದಿಯ ನಿರ್ದಿಷ್ಟ ಶಿಫಾರಸುಗಳನ್ನು ಗಮನಿಸಬೇಕು.

ಅಗತ್ಯವಾದ ಸರಿಪಡಿಸುವ ಕ್ರಮದ ಜಾರಿಗೊಳಿಸುವಿಕೆಯೊಂದಿಗೆ ಮುನ್ನಡೆಯುವಾಗ, ಶಾಹಿ ಸಂಸ್ಥೆಯು ತನ್ನ ಚಟುವಟಿಕೆಗಳ ಕುರಿತು ಸಂವಹನೆ ಮಾಡುವುದು ಮತ್ತು GLU ಜೊತೆಗೆ ತನ್ನನ್ನು ತಾನು ತೊಡಗಿಸಿಕೊಳ್ಳುವುದು ಅತ್ಯಗತ್ಯ. ಇದೊಂದು ವಿಷಯವನ್ನು FLA ಮುಂದೆಯೂ ನಿಕಟವಾಗಿ ಗಮನಿಸುತ್ತಿರುವುದು, ತೆಗೆದುಕೊಂಡ ಕ್ರಮಗಳ ಗುಣಮಟ್ಟ ಮತ್ತು ಪ್ರಭಾವಕ್ಕೆ ಸಂಬಂಧಿಸಿದಂತೆ ಕಾರ್ಖಾನೆ ಮತ್ತು ಸಂಘ ಇಬ್ಬರಿಂದಲೂ ಮಾಹಿತಿಯನ್ನು ಸ್ವಾಗತಿಸುತ್ತದೆ.

FLA ಈ ಗಣನೀಯ ಪ್ರಮಾಣದ ಸಮಯ ತೆಗೆದುಕೊಂಡ ಈ ಪ್ರಕ್ರಿಯೆಯಲ್ಲಿ ಅವರ ನಿರಂತರ ತೊಡಗಿಸಿಕೊಳ್ಳುವಿಕೆ ಮತ್ತು ತೋರಿದ ಅವರ ತಾಳ್ಮೆಗಾಗಿ ನೈಕಿ, ASK, ಸಂಘ, ಮತ್ತು ಕಾರ್ಖಾನೆಯ ಆಡಳಿತವರ್ಗಕ್ಕೆ ಧನ್ಯವಾದ ಸಲ್ಲಿಸುತ್ತದೆ. ಕೈಗೆತ್ತಿಕೊಂಡ ಸತ್ಯಾಂಶ ಮತ್ತು ಕಾನೂನುಬದ್ಧ ವಿಶ್ಲೇಷಣೆಯ ಅಂಶಗಳ ಕುರಿತು ಪಕ್ಷಗಳು ಅರ್ಥಮಾಡಿಕೊಳ್ಳಬಹುದಾದಂತೆ ಹೊಂದಿದ್ದ ವಿಭಿನ್ನ ದೃಷ್ಟಿಕೋನಗಳ

ಹೊರತಾಗಿಯೂ, ASK ಪರಿಣಾಮಕಾರಿ ಜಾರಿಗೊಳಿಸುವಿಕೆಗೆ ಅನುವಾಗುವ ಉತ್ತಮ ವರದಿಯನ್ನು ತಯಾರಿಸಿದೆ.

ಪ್ರಭಾವಿತ ಕಾರ್ಮಿಕರು ವರದಿಯ ಶಿಫಾರಸುಗಳಲ್ಲಿ ನಮೂದಿಸಿರುವ ಪರಿಹಾರ ಪಡೆಯಲು, ಮತ್ತು ಕಾರ್ಖಾನೆಯು ಸಂಘಟನಾ ಸ್ವಾತಂತ್ರ್ಯ, ಕಿರುಕುಳ ಮತ್ತು ನಿಂದನೆ, ಮತ್ತು ಆರೋಗ್ಯ ಹಾಗೂ ಸುರಕ್ಷತೆ ಕುರಿತು FLA ಇರುವ ಮಾನದಂಡಗಳನ್ನು ಭವಿಷ್ಯದಲ್ಲಿ ಅನುಸರಿಸದೇ ಇರುವ ಸಾಧ್ಯತೆಯನ್ನು ಕಡಿಮೆ ಮಾಡಲು ಕಾರ್ಯನೀತಿಗಳು ಮತ್ತು ಕಾರ್ಯವಿಧಾನಗಳ ಸೆಟ್ ಅನ್ನು ಸ್ಥಾಪಿಸುತ್ತದೆ ಎನ್ನುವುದನ್ನು ಖಚಿತಪಡಿಸಿಕೊಳ್ಳಲು ಪರಿಹಾರ ಕ್ರಮವು ಅವಶ್ಯಕ ಆಗಿದೆ.

ಈ ತನಿಖೆಯು ಕಾರ್ಖಾನೆಯಲ್ಲಿ ಶಾಶ್ವತ ಬದಲಾವಣೆಗಳನ್ನು ಉದ್ದೀಪನಗೊಳಿಸಲು ನೆರವಾಗಿದೆ ಎಂಬ ಅಂಶವನ್ನು ಸಂಘ ಮತ್ತು ಆಡಳಿತವರ್ಗ ಇಬ್ಬರೂ ಒಪ್ಪುವಂತೆ, ಕಾರ್ಮಿಕರ ಹಕ್ಕುಗಳನ್ನು ರಕ್ಷಿಸಲು ಮತ್ತು ಕಾರ್ಯಸ್ಥಳದ ಪರಿಸ್ಥಿತಿಗಳನ್ನು ಸುಧಾರಿಸಲು ಮುಂದೆ ಇರಬೇಕಾದ ದಾರಿಯನ್ನು ಒದಗಿಸುವ ರೋಡ್ ಮ್ಯಾಪ್ ಇದಾಗಿದೆ.